**<u>1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರ ಮತ್ತು ಜೆ ಎಂ ಎಫ್ ಸಿ ರವರ</u>**

**<u>ನ್ಯಾಯಾಲಯ, ಭದ್ರಾವತಿ</u>**

**<u>ಸಿ ಸಿ ಸಂಖ್ಯೆ: 1090/2024</u>**

**<u>ದೋಷಾರೋಪಣೆ</u>**

ಶ್ರೀ ಹನುಮಂತ ಜಿ.ಹೆಚ್. ಬಿ.ಎ.ಎಲ್., ಎಲ್‌ಎಲ್.ಎಮ್., 1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ, ಭದ್ರಾವತಿ ಆದ ನಾನು

5. ಸಿದ್ದೀಕ್ ಯಾನೇ ಜಾಫರ್ ಸಿದ್ದೀಕ್
ಬಿನ್ ಹೈದರ್ ಅಲಿ,
ವಯಸ್ಸು 22 ವರ್ಷ,
ವಾಸಃ ತಡಸ ಗ್ರಾಮ,
ಭದ್ರಾವತಿ ತಾಲ್ಲೂಕು, ಶಿವಮೊಗ್ಗ.

ಎಂಬ ಆರೋಪಿತರಾದ ನಿಮ್ಮ ಮೇಲೆ ಈ ಕೆಳಗಿನಂತೆ ಹೊರಿಸುವ ದೋಷಾರೋಪ ಎನೆಂದರೆಃ-

ಮೊದಲನೇಯದಾಗಿ, ದಿನಾಂಕ 20.07.2022 ರಂದು ಸಂಜೆ 5.00 ಗಂಟೆ ಸಮಯದಲ್ಲಿ, ಭದ್ರಾವತಿ ಗ್ರಾಮಾಂತರ ಪೋಲಿಸ್ ಠಾಣಾ ವ್ಯಾಪ್ತಿಯ, ಭದ್ರಾವತಿ ತಾಲ್ಲೂಕಿನ ತಡಸಾ ಗ್ರಾಮದ ಹಿಂದೂಬಾಡಾಗಲ್ಲಿ ವಾಸಿ ಶ್ರೀ ಇಸ್ಮಾಯಿಲ್ ಬಿನ್ ಮಹಮ್ಮದ್‌ಷಾರವರ ವಾಸದ ಮನೆಯ ಎದುರು ರಸ್ತೆಯಲ್ಲಿ, ಮಕ್ಕಳು ಆಟವಾಡುವಾಗ ಆದ ಗಲಾಟೆ ಸಂಬಂಧ, ಸಮಾನ ಉದ್ದೇಶದಿಂದ, ಆರೋಪಿಯಾದ ನೀವು ಇತರೆ ಆರೋಪಿತರೊಂದಿಗೆ ಸೇರಿ ಚಾಸಾ-1/ಶ್ರೀಮತಿ ಯಾಸ್ಮಿನ್ ಬಾನುರವರನ್ನು ಉದ್ದೇಶಿಸಿ, "ಚಿನಾಲ್ ಕೆ ರಾಂಡ್ ತೇರಿ ಮಾ ಕೀ" ಎಂದು ಅವಾಚ್ಯ

ಶಬ್ದಗಳಿಂದ ಬೈದು ಸಾರ್ವಜನಿಕ ನೆಮ್ಮದಿಗೆ ಭಂಗ ಉಂಟು ಮಾಡುವ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ 504 ಸಹ ಕಲಂ 34 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಎರಡನೇಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ, ಸಮಾನ ಉದ್ದೇಶದಿಂದ, ಆರೋಪಿಯಾದ ನೀವು ಇತರೆ ಆರೋಪಿತರೊಂದಿಗೆ ಸೇರಿ ನಿಮ್ಮ ಪೈಕಿ 1 ನೇ ಆರೋಪಿಯು ಚಾಸಾ-1 ರವರ ಎದೆಗೆ ಕೈ ಹಾಕಿ ದೂಡಿ ಅವರಿಗೆ ಅವಮಾನ ಉಂಟು ಮಾಡುವ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ 354 ಸಹ ಕಲಂ 34 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಮೂರನೆಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ, ಸಮಾನ ಉದ್ದೇಶದಿಂದ, ಆರೋಪಿಯಾದ ನೀವು ಇತರೆ ಆರೋಪಿತರೊಂದಿಗೆ ಸೇರಿ ನಿಮ್ಮ ಪೈಕಿ 1 ನೇ ಆರೋಪಿಯು ದೊಣ್ಣೆಯಿಂದ ಚಾಸಾ-1 ಮತ್ತು ಚಾಸಾ-3/ಅಸಿಪುಲ್ಲಾ ರವರ ಮೈಕೈಗೆ ಹೊಡೆದಿದ್ದು ಮತ್ತು 2 ನೇ ಆರೋಪಿಯು ಸಹ ದೊಣ್ಣೆಯಿಂದ ಚಾಸಾ-4/ಸರವನ್ ಅಲಿ ರವರ ಮೈಕೈಗೆ ಹೊಡೆದು ಅವರಿಗೆ ಸಾಮಾನ್ಯ ಸ್ವರೂಪದ ಗಾಯ ಉಂಟು ಮಾಡುವ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ 324 ಸಹ ಕಲಂ 34 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ನಾಲ್ಕನೆಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ, ಸಮಾನ ಉದ್ದೇಶದಿಂದ, ಆರೋಪಿಯಾದ ನೀವು ಇತರೆ ಆರೋಪಿತರೊಂದಿಗೆ ಸೇರಿ ನಿಮ್ಮ ಪೈಕಿ 3 ರಿಂದ 5 ನೇ ಆರೋಪಿತರು ಕೈಗಳಿಂದ ಚಾಸಾ-4 ರವರ ಮೈಕೈಗೆ ಹೊಡೆದು ಅವರಿಗೆ ಸಾದಾ ಸ್ವರೂಪದ ನೋವುಂಟು ಮಾಡುವ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ 323 ಸಹ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಕೊನೆಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ, ಸಮಾನ ಉದ್ದೇಶದಿಂದ, ಆರೋಪಿಯಾದ ನೀವು ಇತರೆ ಆರೋಪಿತರೊಂದಿಗೆ ಸೇರಿ ನೀವು ಚಾಸಾ-1 ರಿಂದ 3 ರವರಿಗೆ ಜೀವ ಬೆದರಿಕೆ ಉಂಟು ಮಾಡುವ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ 506 ಸಹ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ನಾನು ಈ ಮೇಲಿನ ದೋಷಾರೋಪಣೆಗಳ ಮೇಲೆ ಈ ನ್ಯಾಯಾಲಯದ ವಿಚಾರಣೆಗೆ ನೀವು ಗುರಿಯಾಗಬೇಕೆಂದು ನಿರ್ದೇಶಿಸುತ್ತೇನೆ.

ದಿನಾಂಕಃ 07.08.2026

**(ಹನುಮಂತ ಜಿ.ಹೆಚ್.)**
**1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ, ಭದ್ರಾವತಿ.**